### ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆಯವರ ಅಮೂಲ್ಯ ಬೋಧನೆ (ಖಂಡ ೨)

# ಆಚರಣೆಯಿಂದ ಮತ್ತು ಸೂಕ್ಷ್ಮದಿಂದ ಕಲಿಸುವುದು

## (ಕಲಿಸುವಿಕೆಯಿಂದ ಸಾಧಕರಿಗಾದ ಲಾಭಗಳೊಂದಿಗೆ !)

(Teaching through conduct and subtle aspects)

ಕನ್ನಡ (Kannada)


**ಸಂಕಲನಕಾರರು**

**ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷಕರು**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

**ಸಹ ಸಂಕಲನಕಾರರು**

**ಪೂ. ಸಂದೀಪ ಗಜಾನನ ಆಳಶಿ**



**ಸನಾತನ ಸಂಸ್ಥೆ**


**卐 ಭಾರತೀಯ ಭಾಷೆಗಳಿಗನುಸಾರ ಸನಾತನದ ಗ್ರಂಥಗಳ ಸಂಖ್ಯೆ 卐**

ಮರಾಠಿ ೩೪೩, ಆಂಗ್ಲ ೨೦೧, ಕನ್ನಡ ೧೯೭, ಹಿಂದಿ ೧೯೫, ಗುಜರಾತಿ ೬೮, ತೆಲುಗು ೪೫, ತಮಿಳು ೪೩, ಬಂಗಾಲಿ ೨೯, ಮಲಯಾಳಂ ೨೪, ಒರಿಯಾ ೨೨, ಪಂಜಾಬಿ ೧೩, ನೇಪಾಳಿ ೩ ಮತ್ತು ಅಸ್ಸಾಮಿ ೨

**ಡಿಸೆಂಬರ್ ೨೦೨೩ ರವರೆಗೆ ೧೩ ಭಾಷೆಗಳಲ್ಲಿ ೩೬೪ ಗ್ರಂಥಗಳ ೯೪,೯೩,೦೦೦ ಪ್ರತಿ !**

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ಇ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಸೌ. ಅವನಿ ಆಳಶಿ ಮತ್ತು ಸುಶ್ರೀ ಭಾವಿನಿ ಕಾಪಡಿಯಾ

**First Edition** : Datta Jayanti, Kaliyug Varsh 5125
(26th December 2023)

Translated from the original Marathi text 'Acharanatun aani Sukshmatun Shikavne'

**ಅನುವಾದಕರು** : ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 125/-

**ISBN :** 978-93-92952-91-3

ॐ ಗ್ರಂಥ ಕ್ರ. : 364

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

**ಸನಾತನದ ಬಗ್ಗೆ ಹೆಚ್ಚಿನ ಮಾಹಿತಿ ತಿಳಿದುಕೊಳ್ಳಲು : Sanatan.org**

## ಗ್ರಂಥದ ಸಂಕಲನಕಾರರ ಪರಿಚಯ

# ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆಯವರ ಅದ್ವಿತೀಯ ಕಾರ್ಯ ಮತ್ತು ವೈಶಿಷ್ಟ್ಯಗಳ ಸಂಕ್ಷಿಪ್ತ ಪರಿಚಯ !



೧. 'ಈಶ್ವರಪ್ರಾಪ್ತಿಗಾಗಿ ಕಲೆ' ಎಂಬುದರ ಬಗ್ಗೆ ಮಾರ್ಗದರ್ಶನ ಹಾಗೂ ಸಂಗೀತ, ನೃತ್ಯ ಮುಂತಾದ ಕಲೆಯ ಸಾತ್ತ್ವಿಕ ಸಾದರೀಕರಣಕ್ಕಾಗಿ ಸಂಶೋಧನೆ

೨. ಆಚಾರಪಾಲನೆಯಲ್ಲಿನ ಕೃತಿ, ಧಾರ್ಮಿಕ ಕೃತಿ ಮತ್ತು ಬುದ್ಧಿಅಗಮ್ಯ ಘಟನೆಗಳ ಬಗ್ಗೆ ವೈಜ್ಞಾನಿಕ ಉಪಕರಣಗಳ ಮೂಲಕ ಸಂಶೋಧನೆ

೩. ಕೆಟ್ಟ ಶಕ್ತಿಗಳ ಬಗ್ಗೆ ಸಂಶೋಧನೆ ಮತ್ತು ಶಾರೀರಿಕ, ಮಾನಸಿಕ, ಹಾಗೆಯೇ ಕೆಟ್ಟ ಶಕ್ತಿಗಳ ತೊಂದರೆಗಳಿಗೆ ಉಪಾಯಪದ್ಧತಿಗಳ ಸಂಶೋಧನೆ

೪. ೨೧.೧೧.೨೦೨೩ ರವರೆಗೆ ೨ ಬಾಲಸಂತರ, ಹಾಗೆಯೇ ಶೇ. ೬೦ ಕ್ಕಿಂತ ಹೆಚ್ಚು ಆಧ್ಯಾತ್ಮಿಕ ಮಟ್ಟವಿರುವ ೨೨೯ ಮತ್ತು ಇತರ ೯೦೮ ದೈವೀ ಮಕ್ಕಳನ್ನು ಸಮಾಜಕ್ಕೆ ಪರಿಚಯಿಸಲಾಗಿದೆ. ದೈವೀ ಮಕ್ಕಳ ಕುರಿತಾದ ಸಂಶೋಧನೆಯೂ ನಡೆಯುತ್ತಿದೆ.

೫. ತಮ್ಮ ಶರೀರ, ಹಾಗೆಯೇ ಬಳಕೆಯಲ್ಲಿನ ವಸ್ತುಗಳ ದೈವೀ ಪರಿವರ್ತನೆಗಳ ಬಗ್ಗೆ ಸಂಶೋಧನೆ ಮತ್ತು ತಮ್ಮ ಮಹಾಮೃತ್ಯುಯೋಗದ ಸಂಶೋಧನಾತ್ಮಕ ಅಧ್ಯಯನ

**(ಸಂಪೂರ್ಣ ಪರಿಚಯಕ್ಕಾಗಿ ಭೇಟಿ ನೀಡಿ 'www.Sanatan.org/Kannada')**

**ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರು ಸಾಧಕರಿಗೆ ನೀಡಿದ ಭರವಸೆ !**

**ಸ್ಥೂಲದೇಹಕ್ಕಿಹುದು ಸ್ಥಳಕಾಲಗಳ ಪರಿಮಿತಿ ।**
**ಹೇಗಿರಲಿ ಸದಾ ಎಲ್ಲ ಕಡೆಗಳಲ್ಲಿ ॥**
**ಸನಾತನ ಧರ್ಮವಿಹುದು ನನ್ನ ನಿತ್ಯರೂಪ ।**
**ಆ ರೂಪದಲ್ಲಿರುವೆ ಎಲ್ಲ ಕಡೆಗಳಲ್ಲಿ ಸದಾ ॥**

Jayant Balaji Athavale
17.5.1996



**ಪೂ. ಸಂದೀಪ ಗಜಾನನ ಆಳಶಿ**

ಸನಾತನದ ಗ್ರಂಥಗಳ ಅಂತಿಮ ಸಂಕಲನಕಾರರು. ರಾಷ್ಟ್ರ ಜಾಗೃತಿ ಮತ್ತು ಧರ್ಮಪ್ರಸಾರ ಮಾಡುವ ಪ್ರಸಾರಸಾಹಿತ್ಯ (ಉದಾ. ಸನಾತನ ಪಂಚಾಂಗ, ಕರಪತ್ರ) ಹಾಗೂ ಸಾಧನೆ, ರಾಷ್ಟ್ರ ಮತ್ತು ಧರ್ಮ ಇವುಗಳಿಗೆ ಸಂಬಂಧಿಸಿದ ವರ್ತಮಾನಪತ್ರಿಕೆ 'ಸನಾತನ ಪ್ರಭಾತ'ದಲ್ಲಿ ಪ್ರಬೋಧನಾತ್ಮಕ ಲೇಖನವನ್ನು ಬರೆಯುತ್ತಾರೆ.

---

## ಗ್ರಂಥದ ಅನುಕ್ರಮಣಿಕೆ

**(ಅಧ್ಯಾಯದಲ್ಲಿನ ಕೆಲವು ವೈಶಿಷ್ಟ್ಯಪೂರ್ಣ ಉಪಅಂಶಗಳನ್ನೂ ಕೆಳಗೆ ಕೊಡಲಾಗಿದೆ.)**


**ಅಧ್ಯಾಯ ೧. ಸಚ್ಚಿದಾನಂದ ಪರಬ್ರಹ್ಮ ಡಾಕ್ಟರರು ಆಚರಣೆಯಿಂದ ಕಲಿಸುವುದು ೧೧**

೧ ಅ. ಪರಾತ್ಪರ ಗುರು ಡಾ. ಆಠವಲೆಯವರು ತಾಯಿತಂದೆಯರ ಆದರ್ಶ ಸೇವೆಯನ್ನು ಮಾಡಿ ಸಾಧಕರಲ್ಲಿ ಮಾತಾಪಿತೃಗಳ ಸೇವೆಯ ಬೀಜವನ್ನು ಬಿತ್ತುವುದು ೧೧

೧ ಇ. ದೈನಂದಿನ ಜೀವನಕ್ಕೆ ಸಂಬಂಧಿಸಿದ ಕೃತಿಗಳಿಂದ ಕಲಿಸುವುದು ೧೩

* ಸಾಧಕರಿಗೆ ಆಶ್ರಮದ ಪ್ರತಿದಿನದ ಮತ್ತು ಮಾಸಿಕ ಸ್ವಚ್ಛತೆ ಮಾಡುವ ಶಿಸ್ತು ಹಾಕಿ, ತಾವೂ ಅದರಲ್ಲಿ ಭಾಗಿಯಾಗುವುದು ೧೫

೧ ಈ. ಧರ್ಮಾಚರಣೆ ಮತ್ತು ಅಧ್ಯಾತ್ಮದ ಶ್ರೇಷ್ಠತ್ವ ಗಮನಕ್ಕೆ ತಂದು ಕೊಡುವುದು ೧೮

೧ ಉ. ಸ್ವಭಾವದೋಷ–ಅಹಂ ನಿರ್ಮೂಲನೆಯ ಬಗ್ಗೆ ಕಲಿಸುವುದು ೨೦

೧ ಊ. ಸಾಧಕರಿಗೆ ವ್ಯಷ್ಟಿ ಗುಣಗಳನ್ನು ಹೆಚ್ಚಿಸುವ ಬಗ್ಗೆ ಕಲಿಸುವುದು ೨೦

* ಸ್ವಾವಲಂಬನೆ * ವ್ಯವಸ್ಥಿತತನ * ಮಿತವ್ಯಯತನ ೨೧

* ಸಮಯದ ಪೂರ್ಣ ಉಪಯೋಗ * ಅಖಂಡ ಸೇವಾಭಾವ ೩೧

* ಗುರು, ಗುರುಪತ್ನಿ, ಶ್ರೀ ಶಂಕರಾಚಾರ್ಯರ ಬಗೆಗಿನ ಭಾವ ೩೬

* ಅಹಂಶೂನ್ಯತೆ * 'ಎಲ್ಲ ಈಶ್ವರೇಚ್ಛೆಯಿಂದ ಆಗುತ್ತದೆ' ಎಂಬ ದೃಢ ಶ್ರದ್ಧೆ ೪೧

೧ ಎ. ಸಾಧಕರಿಗೆ ಸಮಷ್ಟಿ ಗುಣಗಳನ್ನು ವೃದ್ಧಿಸುವ ಸಂದರ್ಭದಲ್ಲಿ ಕಲಿಸುವುದು ೪೬

* ಇತರರ ವಿಚಾರ * ಧರ್ಮಕಾರ್ಯದ ತಳಮಳ * ಪ್ರೇಮಭಾವ ೪೬

೧ ಏ. ಶಿಷ್ಯತ್ವದ ಬಗ್ಗೆ ಕಲಿಸುವುದು – ಡಾ. ಆಠವಲೆಯವರು ಗುರುಗಳಿಗೆ ವ್ಯಾವಹಾರಿಕ ವಿಷಯಗಳ ಬಗ್ಗೆ ಕೇಳದಿರುವುದು ೬೧

೧ ಐ. ಸೇವೆಗಳ ಸಂದರ್ಭದಲ್ಲಿ ಕಲಿಸುವುದು ೬೧

೧ ಒ. ಸಾಧಕರಲ್ಲಿ ಸ್ವರಕ್ಷಣ ತರಬೇತಿಯ ಗಾಂಭೀರ್ಯ ನಿರ್ಮಾಣವಾಗಲು ಕೆಲವು ಪ್ರಕಾರಗಳನ್ನು ಸ್ವತಃ ಮಾಡುವುದು ೬೨

೧ ಓ. 'ಆಪತ್ಕಾಲವನ್ನು ಎದುರಿಸಲು ಹೇಗೆ ಸಿದ್ಧತೆಯನ್ನು ಮಾಡಬೇಕು ?' ಎಂಬುದನ್ನು ಕಲಿಸುವುದು ೬೨

**ಅಧ್ಯಾಯ ೨. ಸಚ್ಚಿದಾನಂದ ಪರಬ್ರಹ್ಮ ಡಾಕ್ಟರರು ಸೂಕ್ಷ್ಮದಿಂದ ಕಲಿಸುವುದು ೬೪**

೨ ಇ. ಸಾಧಕರಿಗೆ ಸ್ವಭಾವದೋಷ ಮತ್ತು ಅಹಂ ನಿರ್ಮೂಲನೆಯ ಬಗ್ಗೆ ಮಾರ್ಗದರ್ಶನ ಮಾಡುವುದು ೬೬

೨ ಈ. ಸಾಧಕನಿಗೆ ರ್‍ಯಾಕ್ ತಯಾರಿಸುವ ಸೇವೆಯ ಬಗ್ಗೆ ಸೂಕ್ಷ್ಮದಿಂದ ಮಾರ್ಗದರ್ಶನ ಮಾಡುವುದು ೭೨

೨ ಉ. ಭಾವದ ಸಂದರ್ಭದಲ್ಲಿ ಮಾರ್ಗದರ್ಶನ ಮಾಡುವುದು ೭೩

೨ ಊ. ಪರಾತ್ಪರ ಗುರು ಡಾಕ್ಟರರು ದೈನಿಕ 'ಸನಾತನ ಪ್ರಭಾತ'ದ ವಾಚಕನಿಗೆ ಕನಸಿನಲ್ಲಿ ದರ್ಶನ ಕೊಟ್ಟು ಯೋಗ್ಯ ನಾಮಜಪ ಮಾಡುವ ಬಗ್ಗೆ ಹೇಳುವುದು ೭೫

೨ ಎ. ಪರಾತ್ಪರ ಗುರು ಡಾ. ಆಠವಲೆಯವರು ಸೂಕ್ಷ್ಮದಿಂದ ಸಾಧಕರಿಗೆ ವಿವಿಧ ವಿಷಯಗಳ ಬಗ್ಗೆ ಕಲಿಸುವುದು ೭೬

೨ ಏ. ಸಾಧಕಿಯ ಮೃತ್ಯುವಿನ ನಂತರ ಅವಳ ಸೂಕ್ಷ್ಮ ದೇಹಕ್ಕೆ ಮುಂದಿನ ಹಂತದ ಸಾಧನೆಯ ಬಗ್ಗೆ ಮಾರ್ಗದರ್ಶನ ಮಾಡುವುದು ೭೭

**ಅಧ್ಯಾಯ ೩. ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ಕಲಿಸುವಿಕೆಯಿಂದ ಸಾಧಕರಿಗಾದ ಲಾಭ ೭೮**

೩ ಆ. ಪರಾತ್ಪರ ಗುರು ಡಾಕ್ಟರರ ಕಲಿಸುವಿಕೆಯು ಸಾಧಕರಿಗೆ ವ್ಯಾವಹಾರಿಕ ಜೀವನದಲ್ಲೂ ಉಪಯುಕ್ತವಾಗುವುದು ೭೮

೩ ಇ. ಸಾಧಕರಿಂದ ಸ್ವಭಾವದೋಷ ಮತ್ತು ಅಹಂ ನಿರ್ಮೂಲನೆಗಾಗಿ ಪ್ರಯತ್ನಗಳಾಗುವುದು ೮೧

೩ ಈ. ಸಾಧಕರಿಗೆ ಯಾವುದೇ ಪರಿಸ್ಥಿತಿಯನ್ನು ಆನಂದದಿಂದ ಸ್ವೀಕರಿಸಲು ಬರುವುದು ೮೭

೩ ಉ. ಸಾಧಕನಲ್ಲಿನ ಗುಣಗಳು ಹೆಚ್ಚಾಗುವುದು ೮೭

೩ ಊ. ಸಾಧಕರಿಂದ ಭಾವದ ಸ್ತರದಲ್ಲಿ ಕೃತಿಯಾಗುವುದು ೯೩

೩ ಎ. ಸಾಧಕರ ಸಾಧನೆ ಮತ್ತು ಸೇವೆ ಹೆಚ್ಚಾಗುವುದು ೯೫

೩ ಏ. ಪರಾತ್ಪರ ಗುರು ಡಾಕ್ಟರರ ಮಾರ್ಗದರ್ಶನದಿಂದ ಕೆಟ್ಟ ಶಕ್ತಿಗಳ ತೀವ್ರ ತೊಂದರೆಯಿರುವ ಸಾಧಕಿಗೆ ಆಗಿರುವ ಲಾಭ ೯೭

೩ ಐ. ಪರಾತ್ಪರ ಗುರು ಡಾಕ್ಟರರ ದಿವ್ಯ ಬೋಧನೆಯ ಫಲಶ್ರುತಿ – ಕಡಿಮೆ ಕಾಲಾವಧಿಯಲ್ಲಿ ಅನೇಕ ಸಾಧಕರು ಉನ್ನತರು ಮತ್ತು ಸಂತರಾಗುವುದು ೧೦೪

೩ ಒ. ಸನಾತನದ ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಗಾಡಗೀಳರಿಗೆ ಸೂಕ್ಷ್ಮದಿಂದ ದೊರಕಿದ ಈಶ್ವರೀ ಜ್ಞಾನ ! ೧೦೫

೩ ಒ ೧. ಪರಾತ್ಪರ ಗುರು ಡಾಕ್ಟರರು ಕೃಪಾಪೂರ್ವಕವಾಗಿ ಪ್ರದಾನಿಸಿದ ಆಧ್ಯಾತ್ಮಿಕ ಶಿಕ್ಷಣದಿಂದ ಸಾಧಕರಿಗಾದ ಲಾಭ ೧೦೬

* ಸಾಧಕರಿಂದ ಕೌಟುಂಬಿಕ ಮಾಯೆಯ ತ್ಯಾಗವಾಗಿ ರಾಷ್ಟ್ರದ ಬಗ್ಗೆ ಪ್ರೇಮ ನಿರ್ಮಾಣವಾಗುವುದು ೧೦೬

* 'ಎಷ್ಟೇ ಸಂಕಟಗಳು ಬಂದರೂ, ಧ್ಯೇಯದಿಂದ ವಿಚಲಿತರಾಗಬಾರದು' ಎಂಬ ತತ್ತ್ವಸ್ವರೂಪ ಪರಿಪಕ್ವತೆ ಸಾಧಕರಲ್ಲಿ ನಿರ್ಮಾಣವಾಗುವುದು ೧೦೭

**೫ ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ** ೧೧೩

## ವಾಚಕರಿಗೆ ಸೂಚನೆ

ಗ್ರಂಥದಲ್ಲಿನ ಬರಹದಲ್ಲಿ ರಜ–ತಮ, ಸಗುಣ–ನಿರ್ಗುಣ ಇತ್ಯಾದಿ ಆಧ್ಯಾತ್ಮಿಕ ಪರಿಭಾಷೆಯಲ್ಲಿನ ಶಬ್ದಗಳಿವೆ. ಆವಶ್ಯಕವಿರುವಲ್ಲಿ ಇಂತಹ ಶಬ್ದಗಳ ಅರ್ಥ ನೀಡಲಾಗಿದೆ. ಜಿಜ್ಞಾಸುಗಳಿಗೆ ಆರಂಭದಲ್ಲಿ ಈ ಶಬ್ದಗಳು ತಿಳಿಯಲು ಕಠಿಣವೆನಿಸಿದರೂ ಆಧ್ಯಾತ್ಮಿಕ ವಿಷಯ ಓದುವುದು ಅಭ್ಯಾಸವಾದಾಗ ಇಂತಹ ಶಬ್ದಗಳು ಸುಲಭವೆನಿಸುವವು.

## ಮನೋಗತ

'ಸ್ಪರ್ಶಮಣಿಯು ಕಬ್ಬಿಣಕ್ಕೆ ಸುವರ್ಣತ್ವವನ್ನು ಕೊಡಬಲ್ಲದು, ಆದರೆ ತನ್ನ (ಚಿನ್ನವನ್ನಾಗಿ ಪರಿವರ್ತಿಸುವ) ಗುಣವನ್ನು ನೀಡಲಾರದು. ತದ್ವಿರುದ್ಧ ಗುರುಗಳು ಶಿಷ್ಯನ ಮೇಲೆ ಕೃಪೆಗೈದು ಅವನಿಗೆ ತಮ್ಮ ಗುರುತ್ವವನ್ನೇ ಕೊಡುತ್ತಾರೆ ! ಗುರುಕೃಪೆಯಾಗಲು ಮಾತ್ರ ಗುರುಗಳ ಬೋಧನೆಯನ್ನು ಸತತವಾಗಿ ಆಚರಣೆಯಲ್ಲಿ ತರಬೇಕಾಗುತ್ತದೆ. ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆಯವರಂತಹ ಮಹಾನ್ ಗುರುಗಳ ಬೋಧನೆಯನ್ನು ಆಚರಣೆಯಲ್ಲಿ ತಂದು ಇಂದಿನವರೆಗೆ (೨೧.೧೧.೨೦೨೩ ರವರೆಗೆ) ಕೇವಲ ೩೩ ವರ್ಷಗಳಲ್ಲಿ ಸನಾತನದ ೧೨೭ ಸಾಧಕರು ಸಂತರಾದರು, ೧೦೪೭ ಸಾಧಕರು ಶೀಘ್ರವಾಗಿ ಸಂತರಾಗುವ ಮಾರ್ಗದಲ್ಲಿದ್ದಾರೆ ! ಇದರಿಂದ ಸಚ್ಚಿದಾನಂದ ಪರಬ್ರಹ್ಮ ಡಾಕ್ಟರರ ಗುರುತ್ವದ ಮಹಿಮೆ ಗಮನಕ್ಕೆ ಬರುತ್ತದೆ. ಇಂತಹ ಮಹಾನ್ ಗುರುಗಳ ಬೋಧನೆಯೂ ಎಷ್ಟು ಮಹಾನ್ ಆಗಿರಬೇಕು ?

ಸಚ್ಚಿದಾನಂದ ಪರಬ್ರಹ್ಮ ಡಾಕ್ಟರರೆಂದರೆ ಜ್ಞಾನದ ಮೇರುಪರ್ವತ ಮತ್ತು ಗುಣಗಳ ಮಹಾಸಾಗರ ! ಆದ್ದರಿಂದ ಅವರ ಬೋಧನೆಯ ಎತ್ತರ ಮತ್ತು ಆಳದ ಸುಳಿವು ಸುಲಭವಾಗಿ ಸಿಗುವುದಿಲ್ಲ. ಅವರು ಕೇವಲ ಶಬ್ದಗಳಿಂದ ಅಧ್ಯಾತ್ಮವನ್ನು ಕಲಿಸುವುದಿಲ್ಲ, ಅವರ ಸಹಜವಾದ ನಿತ್ಯದ ಆಚರಣೆಗಳೂ ಸಾಧನೆಯ ಬಹುಮುಖ ದೃಷ್ಟಿಕೋನ ಕೊಡುವಂತಹ ಮತ್ತು ಎಷ್ಟೊಂದು ಆದರ್ಶವಾಗಿರುತ್ತವೆ ಎಂದರೆ ಅವರ ಸಹವಾಸದಲ್ಲಿ ಬರುವ ಪ್ರತಿಯೊಬ್ಬರೂ ಬಹಳಷ್ಟು ವಿಷಯಗಳನ್ನು ಕಲಿಯುತ್ತಾರೆ. ಅವರ ಆಚರಣೆಯನ್ನು ನೋಡಿ ನಮಗೂ 'ಯೋಗ್ಯ ಮತ್ತು ಪರಿಪೂರ್ಣ ಕೃತಿಗಳನ್ನು ಹೇಗೆ ಮಾಡಬೇಕು ?' ಎಂಬುದು ತಿಳಿಯುತ್ತದೆ. ನಾವು 'ಶಬ್ದಗಳಿಂದ ಏನು ಕಲಿಯುತ್ತೇವೆಯೋ', ಅದಕ್ಕಿಂತ 'ಕೃತಿಯಿಂದ ಏನು ಕಲಿಯುತ್ತೇವೆಯೋ' ಅದು ಹೆಚ್ಚು ನೆನಪಿನಲ್ಲಿರುತ್ತವೆ. ಈ ದೃಷ್ಟಿಯಿಂದ ಈ ಗ್ರಂಥದಲ್ಲಿ ನೀಡಿದ ಸಾಧಕರ ಅನುಭವಗಳು ಮೌಲ್ಯಯುತವಾಗಿವೆ.

ಸಚ್ಚಿದಾನಂದ ಪರಬ್ರಹ್ಮ ಡಾಕ್ಟರರು ಸೂಕ್ಷ್ಮದಿಂದಲೂ ಸಾಧಕರಿಗೆ ವಿವಿಧ ರೀತಿಯಲ್ಲಿ ಹೇಗೆ ಕಲಿಸುತ್ತಾರೆ ಎಂಬುದನ್ನೂ ಈ ಗ್ರಂಥದಲ್ಲಿ ನೀಡಲಾಗಿದೆ. ಇದನ್ನು ಓದಿ 'ಯಾವುದೇ ಪ್ರತಿಕೂಲ ಪರಿಸ್ಥಿತಿ ಬಂದರೂ ಮತ್ತು ಸಚ್ಚಿದಾನಂದ ಪರಬ್ರಹ್ಮ ಡಾಕ್ಟರರು ಸ್ಥೂಲದಿಂದ ನಮ್ಮೊಂದಿಗೆ ಇಲ್ಲದಿದ್ದರೂ, ಅವರು ಸೂಕ್ಷ್ಮದಿಂದ ನಮ್ಮೊಂದಿಗಿದ್ದು ನಮಗೆ ಸಾಧನೆಯ ದಿಶೆ ಖಂಡಿತವಾಗಿ ಕೊಡುತ್ತಾರೆ' ಎಂಬ ಸಾಧಕರ ಶ್ರದ್ಧೆ ಹೆಚ್ಚಾಗಲೂ ಸಹಾಯವಾಗುತ್ತದೆ.

ಸಚ್ಚಿದಾನಂದ ಪರಬ್ರಹ್ಮ ಡಾಕ್ಟರರು ಸಾಕ್ಷಾತ್ ಚೈತನ್ಯಮೂರ್ತಿಯಾಗಿರುವುದರಿಂದ ಅವರ ಕಲಿಸುವಿಕೆಯೂ ಚೈತನ್ಯದ ಸ್ತರದ್ದಾಗಿದೆ. ಆದ್ದರಿಂದಲೇ ಅವರ ಕಲಿಸುವಿಕೆಯು ಸಾಧಕರ ಅಂತರ್ಮನಸ್ಸಿನವರೆಗೆ ತಲುಪಿ ಅದು ಸಹಜವಾಗಿ ಸಾಧಕರ ಆಚರಣೆಯಲ್ಲಿ ಬರುತ್ತದೆ, ಹಾಗೆಯೇ ಅನೇಕ ವರ್ಷಗಳವರೆಗೆ ಪ್ರಸಂಗಕ್ಕನುಸಾರ ಆ ಬೋಧನೆ ಸಾಧಕರಿಗೆ ನೆನಪಿರುತ್ತದೆ ! ಇದು ಅವರ ಬೋಧನೆಯ ಒಂದು ವಿಭಿನ್ನ ವೈಶಿಷ್ಟ್ಯವೇ ಆಗಿದೆ. ಅವರ ಬೋಧನೆಯಿಂದ ಸಾಧಕರಿಗಾದ ವಿವಿಧ ಲಾಭಗಳನ್ನೂ ಈ ಗ್ರಂಥದಲ್ಲಿ ನೀಡಲಾಗಿದೆ.

ಸಚ್ಚಿದಾನಂದ ಪರಬ್ರಹ್ಮ ಡಾಕ್ಟರರಿಂದ ಅನೇಕ ಜನರು ಅನೇಕ ಪ್ರಕಾರ ಕಲಿತಿದ್ದಾರೆ ಮತ್ತು ಕಲಿಯುತ್ತಲೂ ಇದ್ದಾರೆ. ಕೆಲವು ಸಾಧಕರು ತಮಗೆ ಕಲಿಯಲು ಸಿಕ್ಕಿದ ಅಂಶಗಳನ್ನು ಬರೆದುಕೊಟ್ಟಿದ್ದಾರೆ. ಈ ಅಂಶಗಳ ಆಧಾರದಲ್ಲಿ ಈ ಗ್ರಂಥವನ್ನು ತಯಾರಿಸಲಾಗಿದೆ. ಅನೇಕ ಸಾಧಕರು ಆಗಾಗ ತಮಗೆ ಕಲಿಯಲು ಸಿಕ್ಕಿದ ಅಂಶಗಳನ್ನು ಬರೆದು ಕೊಡುತ್ತಲೇ ಇರುತ್ತಾರೆ. ಆದುದರಿಂದ ಸಚ್ಚಿದಾನಂದ ಪರಬ್ರಹ್ಮ ಡಾಕ್ಟರರ ಬೋಧನೆಯ ಗ್ರಂಥಗಳು ಮುಂದೆ ಆವೃತ್ತಿಗಳ ಮೇಲೆ ಆವೃತ್ತಿಗಳು ಹೊರಬರಲಿವೆ.

'ಸಚ್ಚಿದಾನಂದ ಪರಬ್ರಹ್ಮ ಡಾಕ್ಟರರ ಬೋಧನೆಯನ್ನು ಎಲ್ಲರೂ ಆಚರಣೆಯಲ್ಲಿ ತಂದು ಸಾಧನೆಯನ್ನು ಚೆನ್ನಾಗಿ ಮಾಡಿ ಶೀಘ್ರ ಆಧ್ಯಾತ್ಮಿಕ ಉನ್ನತಿಯನ್ನು ಮಾಡಿಕೊಂಡರೆ ನಿಜವಾದ ಅರ್ಥದಲ್ಲಿ ಈ ಗ್ರಂಥ ಸಾರ್ಥಕವಾಗುವುದು. ಶೀಘ್ರವಾಗಿ ಹೀಗಾಗಲಿ' ಎಂದು ಶ್ರೀ ಗುಚರಣಗಳಲ್ಲಿ ಮನಃಪೂರ್ವಕವಾಗಿ ಪ್ರಾರ್ಥನೆ !'
– (ಪೂ.) ಸಂದೀಪ ಆಳಶಿ

## ಪರಾತ್ಪರ ಗುರು ಡಾ. ಜಯಂತ ಆಠವಲೆಯವರ 'ಸಚ್ಚಿದಾನಂದ ಪರಬ್ರಹ್ಮ' ಎಂಬ ಬಿರುದಿನ ಕುರಿತಾದ ವಿವೇಚನೆ !

೧೩.೭.೨೦೨೨ ರಿಂದ 'ಸಪ್ತರ್ಷಿ ಜೀವನಾಡಿಪಟ್ಟಿ'ಯ ವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಯಂತೆ ಪರಾತ್ಪರ ಗುರು ಡಾ. ಆಠವಲೆಯವರನ್ನು 'ಸಚ್ಚಿದಾನಂದ ಪರಬ್ರಹ್ಮ' ಎಂದು ಸಂಬೋಧಿಸಲಾಗುತ್ತಿದೆ. ಇದಕ್ಕೂ ಮೊದಲು ಗ್ರಂಥಗಳಲ್ಲಿ ಅವರನ್ನು 'ಪ.ಪೂ. (ಪರಮ ಪೂಜ್ಯ)' ಮತ್ತು 'ಪರಾತ್ಪರ ಗುರು' ಎಂಬ ಬಿರುದುಗಳಿಂದ ಸಂಬೋಧಿಸಲಾಗಿದೆ. ಇದಕ್ಕನುಸಾರ ಪ್ರಸ್ತುತ ಗ್ರಂಥದ ಮುಖಪುಟದಲ್ಲಿ ಮತ್ತು ಗ್ರಂಥದಲ್ಲಿ ಆವಶ್ಯಕವಿರುವ ಕಡೆ ಹೀಗೆ ಉಲ್ಲೇಖಿಸಲಾಗಿದೆ.